## ವಿದೇಶ ವಾಸದ ನೆನಪುಗಳು

ಬೇರೆ ದೇಶಗಳಲ್ಲಿದ್ದಾಗ ಕನ್ನಡ ಭಾಷಿಕರು ಸೇರಿ ಸಂಘ ಮಾಡಿಕೊಂಡಿದ್ದೆವು. ವರ್ಷಕ್ಕೊಮ್ಮೆ ನಾಟಕಗಳನ್ನು ಮಾಡುತ್ತಿದ್ದೆವು. 'ನಟೀರ್ ಪೂಜಾ', 'ನೆರಳು' ನಾಟಕಗಳನ್ನು ಆಡಿದ್ದೆವು. 'ನೆರಳು' ನಾಟಕದಲ್ಲಿ ಇಬ್ಬರೂ ಪಾತ್ರ ಮಾಡಿದ್ದೆವು. ಗಂಡನ ಬಗ್ಗೆ ಸಂಶಯ ಪಟ್ಟು ಚಿತ್ತಸ್ವಾಸ್ಥ್ಯ ಕಳೆದುಕೊಂಡ ಹೆಂಡತಿಯ ಪಾತ್ರದಲ್ಲಿ ಅಭಿನಯಿಸಿದ್ದೆ. ಅವರು ಗಂಡನ ಪಾತ್ರವನ್ನು ವಹಿಸಿದ್ದರು. ನನ್ನ ಪಾತ್ರಕ್ಕೆ ಸಹಾನುಭೂತಿ, ಪ್ರಶಂಸೆ ಸಿಕ್ಕಿತ್ತು. ಸಂಘದಿಂದಾಗಿ ಸುಮಾರು ಜನ ಸ್ನೇಹಿತರಾದರು. ಅದೊಂದು ಒಳ್ಳೆಯ ಅನುಭವ. ಜಾಂಬಿಯಾದಲ್ಲಿ ಎಂಟು ವರ್ಷ ಕನ್ನಡ ಸಂಘ ನಡೆಸಿದ್ದೆವು. ಹೀಗೆ ಹೋದಲೆಲ್ಲ ಒಂದಷ್ಟು ಕನ್ನಡ ಮಾತಾಡುವ ಜನ ಸಿಗುತ್ತಿದ್ದರು.

ಆ ದೇಶಗಳ ವಾತಾವರಣ ಬಹಳ ಚೆನ್ನಾಗಿತ್ತು. ಮನೆಕೆಲಸ ಮಾಡುವುದು ಏನೂ ಕಷ್ಟವಾಗುತ್ತಿರಲಿಲ್ಲ. ಒಂದು ಟೈಂ ಟೇಬಲ್ ಹಾಕಿಟ್ಟುಕೊಂಡಿದ್ದೆ. ಅದರಂತೆ ಕೆಲಸಗಳು ಸಾಗುತ್ತಿದ್ದವು. ಎಂದೂ ಕಷ್ಟ ಅನ್ನಿಸಲಿಲ್ಲ. ಮನೆಯಲ್ಲಿ ಕೆಲಸ ಮುಗಿಸಿ ಮಕ್ಕಳನ್ನು ಸ್ಕೂಲಿಗೆ ಕಳಿಸಿ ನಾವೂ ಕೆಲಸಗಳಿಗೆ ಹೊರಡುತ್ತಿದ್ದೆವು. ಮಧ್ಯಾಹ್ನದ ಹೊತ್ತಿಗೆ ಎಲ್ಲರೂ ಹೆಚ್ಚುಕಡಿಮೆ ಒಂದೇ ಸಮಯಕ್ಕೆ ಮನೆ ಸೇರುತ್ತಿದ್ದೆವು. ಶಾಲೆ ಕೂಡ ಮನೆಗೆ ಹತ್ತಿರವೇ ಇತ್ತು.

ಅಲ್ಲಿಂದ ಅಮ್ಮ, ಅಕ್ಕ, ಸ್ನೇಹಿತರ ಜೊತೆ ಮಾತಾಡಬೇಕೆಂದರೆ ಪೋಸ್ಟ್ ಆಫೀಸಿನಲ್ಲಿ ಟ್ರಂಕಾಲ್ ಬುಕ್ ಮಾಡಿ ಕಾಯುತ್ತಾ ಕೂತಿರುತ್ತಿದ್ದೆವು. ಅದಕ್ಕಿಂತ ಹೆಚ್ಚು ಮಜ ಕೊಡುತ್ತಾ ಇದ್ದದ್ದು ಪತ್ರಗಳು. ಪೋಸ್ಟ್ ಮ್ಯಾನ್ ಬರೋ ಹೊತ್ತಿಗೆ ಏನಾದರೂ ಪೋಸ್ಟ್ ಬಂದಿರಬಹುದಾ ಅಂತ ಕಾಯುತ್ತಿದ್ದೆವು. ಅಮ್ಮ ಪತ್ರ ಬರೀತಿದ್ದಳು. ನಾವು ಅಲ್ಲಿಂದ ಇಲ್ಲಿಗೆ ಪತ್ರ ಬರೀತಿದ್ದೆವು. ಏನಾದರೂ ಪತ್ರ ಬಂದಿದೆ ಅಂದರೆ **full excitement.**



ಜಗತ್ತು ಎಷ್ಟು ವಿಶಾಲವಾಗಿದೆ ಅನ್ನುವುದು ತಿಳಿಯುವುದೇ ಹೊರಗೆ ಓಡಾಡಲು ಶುರು ಮಾಡಿದಾಗ. ಜಗತ್ತಿನ ಯಾವುದೇ ಭಾಗಕ್ಕೆ ಹೋದರೂ ಜನ ಒಂದೇ ರೀತಿ. ನಮಗೆ ಯಾವುದು ನೋವು ಮಾಡುತ್ತದೆಯೋ ಅದೇ ಅವರಿಗೂ ನೋವು ಕೊಡುತ್ತದೆ. ಅದನ್ನು ತಿಳಿದು ಒಡನಾಡಿದಾಗ ಎಲ್ಲೇ ಹೋದರೂ ಜೀವನ ಸುಲಭವಾಗುತ್ತದೆ. **The bridge must be comfortable, safe and pleasant between you**